

ಈ ಕುರಿತು, ತಿಂಡಿಯ ಮೇಜಿನಲ್ಲಿ ಭೂಮಿಯೆದುರು ಹೇಳಿಕೊಂಡಾಗ ಸಿಕ್ಕಾಪಟ್ಟೆ ನಕ್ಕುಬಿಟ್ಟಳು. 'ಈ ಹುಡುಗಿಯರನ್ನ ನಂಬಬೇಡ, ಅಭೀ... ಭಾರೀ ಮೋಸ...' ಅಂದಿದ್ದಳು. 'ನಾನು ಹೇಳಿದ್ದೂ ಅದನ್ನೇ ಅಲ್ಲವಾ, ಭೂ... ಹವ್ ಸ್ಟ್ರೇಂಜ್!' ಅಂತಂದೆ. 'ಆದರೂ ಚೆನ್ನಾದ ಹುಡುಗಿ... ಮಹಾ ರೂಪವತಿ...' ಭೂಮಿ ಕುಣಾಲಿಯನ್ನು ನೆನೆದು ಹೇಳಿದಳು. 'ತುಂಬಾ ಡೀಸೆಂಟ್ ಅಲ್ಲವಾ? ಆದರೆ ನೀನು ಹೇಳುತಿರೋದು ನಂಬೋಕೇ ಆಗಲ್ಲ...'

ಕುಣಾಲಿ ಮತ್ತು ಆಗ್ನೇಯರ ಬಗ್ಗೆ, ಒಂದೆರಡು ಸರ್ತಿ ಬಲು ಮೊಟುಕಾಗಿ ಭೂಮಿಯೆದುರು ಹೇಳಿದ್ದೆ. ಆಗ ಇವಳು ಹೆಚ್ಚು ತಲೆಕೆಡಿಸಿಕೊಂಡಿರಲಿಲ್ಲ. ಅಥವಾ ಕೇಳಿಸಿಕೊಂಡೂ ಆಸಕ್ತಿ ತೋರಿರಲಿಲ್ಲ. ಆದರೆ ಈಗ, ಈ ಮೋಹ ಮತ್ತು ಮೋಸದ ಬಗೆಗೆ ಹೇಳಿದ್ದೇ, ಥರ್ಮಾಮೀಟರೊಳಗಿನ ಬಿಸಿ ತಾಕಿದ ಮರ್ಕ್ಯುರಿಯ ಹಾಗೆ ಕುತೂಹಲವನ್ನು ಏರಿಸಿಕೊಂಡು ಕುಳಿತಳು.

'ಅದು ಸರಿ... ಈ ಹುಡುಗೀರು ನಿನ್ನ ಹತ್ತಿರವೇ ಬಂದೇಕೆ ಇಂಥ ವಿಷಯ ಹೇಳಿಕೊಳ್ಳುತಾರೆ?' ಸರಕ್ಕನೆ ವಿಷಯಾಂತರವಾಯಿತು. ಅಸಂಬದ್ಧ ವರಸೆ. ಅನಗತ್ಯ ತನಿಖೆ... ಮಾತು ತೋಚದಾದೆ.

'ಆಹಹಾಹ... ಬ್ಲಷ್ ಮಾಡೋದು ನೋಡು... ನೀನೂ ಇವುಗಳ ಮೇಲೆ ಕಣ್ಣು ಹಾಕಿರುತ್ತೀ. ಅದಕ್ಕೇ ಹೀಗೇ...' ಎಷ್ಟಾದರೂ ಹೆಂಡತಿಯಲ್ಲವೆ? ನನ್ನ ಪುರಾಣೇತಿಹಾಸವನ್ನೆಲ್ಲ ಎತ್ತೆತ್ತಿ ಆಡಿದಳು. ನನ್ನ ಹಳೆಯ ಗೆಳತಿಯರ ಹೆಸರುಗಳೆಲ್ಲ ಆಟಕ್ಕೆ ಬಿಟ್ಟ ಬೊಂಬೆಗಳ ಹಾಗೆ ಸುಳಿದಾಡಿದವು. ಶರಣ್ಯಾ, ಶಮಂತ, ಅದಿತಿ... ಫೆಮಿನಾ... ನನಗೇ ಗೊತ್ತಿರದ ಸಂಗತಿಯೆಲ್ಲ ಉರುಟಾಡಿದವು. 'ನಿನಗೇನು ಕಮ್ಮಿ ವಯಸ್ಸಾ, ಅಭೀ... ಐವತ್ತೆರಡಾಯಿತು. ಸುಮ್ಮನೆ ಈ ಚಿಲ್ಟಾರಿಗಳ ಲವ್ ಅಫೇರ್ಸ್ ಕೇಳಿಕೊಂಡಿರುತೀಯಲ್ಲಾ... ಅದೂ ಆಫೀಸಿನಲ್ಲಿ? ಬಾಸ್ ಇರಬೇಕಾದ ಹಾಗೆ ಗಂಭೀರವಾಗಿ ಇರೋಕ್ಕಾಗಲ್ಲ?' ಉಪದೇಶಿಸಿದಳು. 'ಆಹಾ... ನನಗೆ

